# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

## ಕನ್ನಡ ರತ್ನ ಪರೀಕ್ಷೆ – ೨೦೧೫

### ಪ್ರಶ್ನೆಪತ್ರಿಕೆ – ೧

### ಹಳಗನ್ನಡ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**೧. ಈ ಪದ್ಯದ ಭಾವಾರ್ಥ ಬರೆಯಿರಿ.** **೧೦**

ಹೊಳೆವ ಕಂಗಳ ಕಾಂತಿಗಳ ಥಳ
ಥಳಿಪ ವದನಪ್ರಭೆಯ ರತ್ನಾ
ವಳಿಯ ಬಹುವಿಧರಶ್ಮಿಗಳ ಲಾವಣ್ಯ ಲಹರಿಗಳ
ಎಳನಗೆಯ ಸುಲಿಪಲ್ಲ ಮುಕ್ತಾ
ವಳಿಯ ನಖ ದೀಧಿತಿಯ ಬೆಳಗಿನ
ಬಳಗವೆನೆ ಬಾಲಕಿಯರಿದ್ದರು ಸತಿಯ ಬಳಸಿನಲಿ

**೨. ಐದನ್ನು ಕುರಿತು ಸಂಕ್ಷಿಪ್ತ ಉತ್ತರ ಬರೆಯಿರಿ.** **೨೫**

ಅ) ಕಾರ್ತಿಕನಿಗೆ ವೈರಾಗ್ಯ ಉಂಟಾದ ಸಂಗತಿಯನ್ನು ತಿಳಿಸಿ.

ಆ) ನೀಲಾಂಜನೆಯು ರಂಗಪ್ರವೇಶಿಸಿದ ಸನ್ನಿವೇಶವನ್ನು ಚಿತ್ರಿಸಿ.

ಇ) ಮಹಾಶ್ವೇತೆಯಲ್ಲಿ ಪುಂಡರೀಕನು ಮನಸೋತ ಸಂದರ್ಭವನ್ನು ವಿವರಿಸಿ.

ಈ) ಬದಗನ ರೂಪವರ್ಣನೆಗೆ ಅಮೃತಮತಿ ಮನ ಸೋತಿದ್ದು ಸರಿಯೇ? ಚರ್ಚಿಸಿ.

ಉ) ದೂತ ಮತ್ತು ದ್ರೌಪತಿಯ ನಡುವೆ ನಡೆವ ಸಂಭಾಷಣೆಯನ್ನು ಕ್ರೋಡೀಕರಿಸಿ ಬರೆಯಿರಿ.

ಊ) ಕಾಡಿನಲ್ಲಿ ಸೀತೆ ಏನೇನು ಕಾಣಲು ಬಯಸುತ್ತಾಳೆ?

ಋ) ಕಪಿಯನ್ನು ತನ್ನ ಹೆಂಡತಿಯ ಕಡೆಗೆ ಕರೆದೊಯ್ಯಲು ಮೊಸಳೆಯು ಯೋಚಿಸಿದ ಉಪಾಯವೇನು? ವಿವರಿಸಿ.

ಎ) ಮಕರಂದಾಜಿಯ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

(ಪು.ತಿ.ನೋ.)

೭/೧

**೩. ಮೂರನ್ನು ಕುರಿತು ಟಿಪ್ಪಣಿ ಬರೆಯಿರಿ.** **೧೫**

ಅ) ಹಲ್ಮಿಡಿ ಶಾಸನದ ಕಾಲ

ಆ) ಕೂಗಳಿಯ ಕ್ರೌಂಚ

ಇ) ಅಗ್ನಿ ರಾಜ

ಈ) ಬೇಡರ ಕಣ್ಣಪ್ಪ

ಉ) ರತ್ನಾಕರವರ್ಣಿ

**೪. ಹತ್ತು ಪದಗಳಿಗೆ ಅರ್ಥ ಬರೆಯಿರಿ.** **೧೦**

| | |
|---|---|
| ಅ) ಭಟಹರ್ | ಋ) ರುಜೆ |
| ಆ) ವಿಷಯ | ಎ) ದರ್ಪಕ |
| ಇ) ಬೆಡಂಗು | ಏ) ಸೆಜ್ಜರ |
| ಈ) ಗಹನ | ಐ) ಹರಿ |
| ಉ) ಜಂಬುಕ | ಒ) ಅಚ್ಯುತ |
| ಊ) ಪಯೋಧಿ | ಓ) ತೃಣ |

**೫. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **೪೦**

ಅ) ಹಲ್ಮಿಡಿ ಶಾಸನದಲ್ಲಿ ದಾಖಲಾದ ಸಂಗತಿಗಳನ್ನು ವಿವರಿಸಿ.

ಆ) ವೀರಮತಿ ರಾಣಿ ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಲು ಕಾರಣವನ್ನು ವಿವರಿಸಿ.

ಇ) ನೀಲಾಂಜನೆಯು ಮಿಂಚಿನಂತೆ ರಂಗಮಂಟಪದಿಂದ ಅದೃಶ್ಯಳಾದದ್ದು, ಆದಿನಾಥನ ಮೇಲೆ ಉಂಟಾದ ಬದಲಾವಣೆ ವಿವರಿಸಿ.

ಈ) ಮಹಾಶ್ವೇತೆಯ ವೃತ್ತಾಂತವನ್ನು ಸವಿಸ್ತಾರವಾಗಿ ತಿಳಿಸಿ.

ಉ) ಯಶೋಧರನಂತಹ ಸುಂದರ ಗಂಡನಿದ್ದು, ಅಮೃತಮತಿ ಅಷ್ಟಾವಕ್ರನಾದ ಬದಗನಿಗೆ ಮಾರುಹೋಗಿದ್ದು ಸರಿಯೇ? ಚರ್ಚಿಸಿ.

ಊ) ರಾಮನ ಆಜ್ಞೆಯನ್ನು ಲಕ್ಷ್ಮಣನು ಸೀತೆಗೆ ತಿಳಿಸುವ ಸಂದರ್ಭವನ್ನು ವಿವರಿಸಿ.

****

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ರತ್ನ ಪರೀಕ್ಷೆ – ೨೦೧೫

**ಪ್ರಶ್ನೆಪತ್ರಿಕೆ – ೨**

## ಹೊಸಗನ್ನಡ ಸಾಹಿತ್ಯ (ಕಾವ್ಯ ಮತ್ತು ಸಣ್ಣಕತೆ)

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಒಂದರ ಭಾವಾರ್ಥ ಬರೆಯಿರಿ.** **೦೫**

೧) ಹಿತದ ಮಾತುಗಳಾಡುತಾತನ
ಖತಿಯನಿಳುಹಿದೆ; ಬೇಡವೆಂದರು
ಜೊತೆಯೊಳೊಯ್ದೆನು ಹೆಜ್ಜೆಹೆಜ್ಜೆಗು
ನಿಂತು ಮುದುಕನ ನಡೆಸುತ

೨) "ಬಟ್ಟಲಿನ ತುಂಬ ಇದೆ ಜೇನು ಈ ಚೊಂಬಿನಲಿ
ತಣ್ಣಗಿನ ನೀರು ಇದೆ ತೆಗೆದುಕೊಳ್ಳಿ
ಇಲ್ಲಿಹುದು ಬೀಸಣಿಕೆ, ಬಹಳ ಸೆಕೆ ಅಲ್ಲವೇ?
ಇದರಿಂದ ಗಾಳಿಯನು ಬೀಸಿಕೊಳ್ಳಿ"

**II. ನಾಲ್ಕಕ್ಕೆ ಸಂದರ್ಭ ಸಹಿತ ವಿವರಿಸಿ.** **೧೨**

೧) ಕೊಳದ ನೀರಲ್ಲಿ ತಮ್ಮ ಪ್ರತಿಬಿಂಬ ಕಂಡು

೨) ದೂರದೇಶಕ್ಕೆ ದಂಡೆತ್ತಿ ಹೋದಾಗ

೩) ಆಕಾಶದಲ್ಲಿ ಗ್ರಹತಾರೆ ಚಲ್ಲಾಪಿಲ್ಲಿ ಚೆಲ್ಲಿ ಬಿದ್ದಿದ್ದಾವೆ

೪) ಪೂರ್ವದ ಜೀವಜಾತಕಗಳೆಲ್ಲ ಮಾತು ಕಳೆದವು

೫) ಉಕ್ಕುಕ್ಕಿ ಬರುವ ದುಃಖದ ಮಹಾಪೂರವನ್ನೂ

೬) ನನಗೂ ಹಂಗಿನ ಬದುಕು ಅಪ್ಪೋ ಆಸೆಯಿಲ್ಲ

**III. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೦೮**

೧) ಕುರುಡು ಕಾಂಚಾಣ

೨) ಪಿ. ಲಂಕೇಶ್

೩) ಬಿ.ಎಂ. ಶ್ರೀಕಂಠಯ್ಯ

೪) ಜಿ.ಪಿ. ರಾಜರತ್ನಂ

೫) ಕುವೆಂಪು

೬) ನನ್ನ ನಲ್ಲ

(ಪು.ತಿ.ನೋ.)



**IV. ಐದು ಪ್ರಶ್ನೆಗಳಿಗೆ ಉತ್ತರಿಸಿ.** **೨೫**

೧) ಕೊಡವರ ಬದುಕಿನ ವೈಶಿಷ್ಟ್ಯವನ್ನು ಸಾರುವ 'ಹುತ್ತರಿ ಹಾಡು' ಕವನವನ್ನು ವಿವರಿಸಿ.

೨) ಕುರುಡು ಕಾಂಚಾಣ ಕವಿತೆಯನ್ನು ಪರಿಚಯಿಸಿ.

೩) 'ಕಣಿವೆಯ ಮುದುಕ' ಕವಿತೆಯಲ್ಲಿನ ಮನುಷ್ಯ ಸಂಬಂಧಗಳನ್ನು ತಿಳಿಸಿಕೊಡಿ.

೪) 'ಹೆಣ್ಣಾಟ' – ಕವನದಲ್ಲಿ ವ್ಯಕ್ತವಾಗಿರುವ ಹೆಣ್ಣಿನ ಬದುಕಿನ ಅಸಹಾಯಕತೆಯನ್ನು ನಿರೂಪಿಸಿ.

೫) ಕನ್ನಡಾಭಿಮಾನವನ್ನು ಹೆಂಡಕುಡುಕ ರತ್ನನ ಪದಗಳು ಹೇಗೆ ಪಡೆಮೂಡಿಸಿವೆ?

೬) ತಾಯಿಯ ನೆನಪಿನ ಜೀವಂತ ಚಿತ್ರವನ್ನು ಗಂಗಾಧರ ಚಿತ್ತಾಲರು ಹೇಗೆ ಚಿತ್ರಿಸಿದ್ದಾರೆ?

೭) ಪರಂಪರೆಯಿಂದ ಹರಿದು ಬಂದ ಸಂಪ್ರದಾಯ – ಆಚರಣೆಗಳು 'ಅಮ್ಮ, ಆಚಾರ, ನಾನು' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿವೆ?

**V. ಒಂದು ಪ್ರಶ್ನೆಗೆ ಉತ್ತರಿಸಿ.** **೧೦**

೧) ಜೀವನ ಪ್ರೀತಿಯೇ ಬದುಕಿನ ಮುಖ್ಯಧ್ಯೇಯವೆಂಬ ಆಶಯ 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?' – ಪದ್ಯದಲ್ಲಿ ಹೇಗೆ ವ್ಯಕ್ತಗೊಂಡಿದೆ? ವಿವರಿಸಿ.

೨) ಶತಮಾನಗಳಿಂದಲೂ ಅವಮಾನಕ್ಕೆ ಗುರಿಯಾದ ದಲಿತರ ಚಿತ್ರಣವನ್ನು 'ಚಪ್ಪಲಿ ಮತ್ತು ನಾನು' ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.

### ಭಾಗ – ೨

**I. ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** **೨೦**

೧) 'ಯಾರೂ ಅರಿಯದ ವೀರ' – ಕಥೆಯ ಕಥಾನಾಯಕ ಲಿಂಗನ ಬದುಕನ್ನು ಮಲೆನಾಡ ಪ್ರಕೃತಿ ವಿಕೋಪದೊಡನೆ ಸಮೀಕರಿಸಿ ಬರೆಯಿರಿ.

೨) ಭಗ್ನಪ್ರೇಮಿ ವೆಂಕಟಸ್ವಾಮಿಯ ದುರಂತವನ್ನು ವಿವರಿಸಿ.

೩) ಮನುಷ್ಯರ ವಿಕೃತಿ ಮನಸ್ಸು – ಹೆಣ್ಣಿನ ಕರುಣಾಜನಕ ಸನ್ನಿವೇಶ 'ಕತೆಯಾದಳು ಹುಡುಗಿ'ಯಲ್ಲಿ ಹೇಗೆ ನಿರೂಪಿತವಾಗಿದೆ? ವಿವರಿಸಿ.

೪) 'ಮಾರಿಕೊಂಡವರು' ಕಥೆಯ ಸ್ವಾರಸ್ಯವನ್ನು ಬರೆಯಿರಿ.

೫) 'ಅವನತಿ' – ಕಥೆಯಲ್ಲಿ ಬಡತನ, ಮೂಢನಂಬಿಕೆ. ಸೌಂದರ್ಯ – ಇವು ಬದುಕಿನೊಡನೆ ಹೇಗೆ ಹೆಣೆದುಕೊಂಡಿವೆ? ವಿವೇಚಿಸಿ.

**II. ಎರಡಕ್ಕೆ ಟಿಪ್ಪಣಿ ಬರೆಯಿರಿ.** ೧೦

೧) ದೇವನೂರು ಮಹಾದೇವ
೨) ಪೂರ್ಣಚಂದ್ರ ತೇಜಸ್ವಿ
೩) ಬೆಸಗರಹಳ್ಳಿ ರಾಮಣ್ಣ
೪) ಯಾರೂ ಅರಿಯದ ವೀರ
೫) ಗಂಟೆ ಜೋಗಿ
೬) ಜೇನು ಹುಡುಗಿ

**III. ಎರಡಕ್ಕೆ ಸಂದರ್ಭ ಸಹಿತ ವಿವರಿಸಿ.** ೧೦

೧) ನಾಳೆ ನಾಡಿದ್ದರಲ್ಲಿ ಹೋಗೋಣ ಅಂತಿದೀನಿ
೨) ಅಳಬೇಡ ನಾಗ ಅಪ್ಪ ಬರ್ತಾನೆ
೩) ಕೊನೆಗೂ ನನ್ನ ಮುದ್ದು ಜಾನಕಿ ಕತೆಯಾಗಿದ್ದಳು
೪) "ಮಚ್ಚು ಮಡಗಿವನಿ ತೊಲೆಮ್ಯಾಗ........... ರಡಿ ರಡಿಯಾಗೈತೆ"
೫) ಅವರ ಸೊಸೆ ಸತ್ತು ಹೋದರು.............

***



# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ರತ್ನ ಪರೀಕ್ಷೆ – ೨೦೧೫

**ಪ್ರಶ್ನೆಪತ್ರಿಕೆ – ೩**

## ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ

[ ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಎರಡು ಪುಟಗಳಿಗೆ ಕಡಿಮೆ ಇಲ್ಲದಂತೆ ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೩೦

೧. ಪ್ರೊ. ಎನ್. ರಂಗನಾಥಶರ್ಮ ಅವರು ನಿರೂಪಿಸುವ ನವರಸಗಳ ಸ್ವರೂಪ ಎಂಥದ್ದು? ವಿವರಿಸಿ.
೨. ಕಾವ್ಯ ವಿಮರ್ಶೆಯ ನೆಲೆಗಳು ಯಾವುವು? ವಿವರಿಸಿ.
೩. ಕಾವ್ಯ ಮೀಮಾಂಸೆಯಲ್ಲಿ 'ವೇದಾಂತ'ದ ಸ್ಥಾನವನ್ನು ವಿವರಿಸಿ.

**II ಎಂಟಕ್ಕೆ ಟಿಪ್ಪಣಿ ಬರೆಯಿರಿ.** ೪೦

೧) ಸಾಹಿತ್ಯ
೨) ರೌದ್ರರಸ
೩) ಕವಿ ಸಮಯ
೪) ನಾಟ್ಯಶಾಸ್ತ್ರ
೫) ಸಿ.ಪಿ.ಕೆ
೬) ಓದುವಿಕೆ
೭) ಸಬ್ಲೈಮ್((Sublime))
೮) ಪಾಶ್ಚಾತ್ಯ ಕಾವ್ಯಮೀಮಾಂಸೆ
೯) ಮುಳಿಯ ತಿಮ್ಮಪ್ಪಯ್ಯ
೧೦) ಸೋಗಿನ ನೆಲೆ

**III ಇವುಗಳಲ್ಲಿ ಐದಕ್ಕೆ ಒಂದು ಪುಟಕ್ಕೆ ಕಡಿಮೆ ಇರದಂತೆ ಉತ್ತರಿಸಿ.** ೩೦

೧) ಸಾಹಿತ್ಯ ಸಂಹಿತೆಯ ಸ್ವರೂಪವನ್ನು ಬರೆಯಿರಿ.
೨) ಧ್ವನಿತತ್ವದ ಮಹತ್ವವೇನು? ವಿವರಿಸಿ.
೩) ಭಾರತೀಯ ಕಾವ್ಯಮೀಮಾಂಸೆಯ ಸ್ವರೂಪವನ್ನು ವಿವರಿಸಿ.
೪) ಶೈಲಿಶಾಸ್ತ್ರದ ಮುಖ್ಯ ಉದ್ದೇಶಗಳನ್ನು ವಿವರಿಸಿ.
೫) ಸಾಹಿತ್ಯದಲ್ಲಿ ಕವಿಪ್ರತಿಭೆಯ ಮಹತ್ವವನ್ನು ಬರೆಯಿರಿ.
೬) ರಾಚನಿಕ ಚಿಂತನೆಯ ಮಹತ್ವವನ್ನು ಕುರಿತು ಬರೆಯಿರಿ.
೭) ಕಾವ್ಯದಲ್ಲಿ ತತ್ವಜ್ಞಾನದ ಮಹತ್ವವೇನು? ಉತ್ತರಿಸಿ.

****

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

## ಕನ್ನಡ ರತ್ನ ಪರೀಕ್ಷೆ – ೨೦೧೫

ಪ್ರಶ್ನೆಪತ್ರಿಕೆ – ೪

## ಭಾಷಾ ವಿಜ್ಞಾನ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೨೦

೧) ಉಪಭಾಷೆಗಳು ಉಂಟಾಗಲು ಕಾರಣಗಳೇನು?

೨) ಶಿಷ್ಟಭಾಷೆಯ ಸ್ವರೂಪವೇನು?

೩) ಭಾಷಾದ್ವಿರೂಪತ್ವ ಎಂದರೇನು? ಉದಾಹರಣೆಗಳೊಂದಿಗೆ ವಿವರಿಸಿ.

೪) ಲಿಪಿಪರಿಷ್ಕರಣೆ ಬಗ್ಗೆ ಬಿ.ಎಂ.ಶ್ರೀ. ಅಭಿಪ್ರಾಯ ತಿಳಿಸಿ.

೫) 'ಅನ್ಯಭಾಷಾ ಶಿಕ್ಷಣ–ಮಾತೃಭಾಷಾ ಶಿಕ್ಷಣದಷ್ಟು ಸುಲಭವಲ್ಲ' ಎಂದು ಏಕೆ ಹೇಳಲಾಗಿದೆ?

೬) ಕನ್ನಡ ಭಾಷೆಯ ಅವಸ್ಥಾಂತರಗಳನ್ನು ಕುರಿತು ಬರೆಯಿರಿ.

**II. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೩೦

೭) ಭಾಷಾವಾರು ಪ್ರಾಂತಗಳ ಬಗ್ಗೆ ಅಂಬೇಡ್ಕರ್ ಅವರ ಅಭಿಪ್ರಾಯವನ್ನು ತಿಳಿಸಿ.

೮) ಸಾಮಾಜಿಕ ಭಾಷಾವಿಜ್ಞಾನದ ಚರಿತ್ರೆಯನ್ನು ಪರಿಚಯಿಸಿ.

೯) 'ಮಂಡ್ಯ ಕನ್ನಡ ಶಿಷ್ಟಭಾಷೆಗಿಂತ ಭಿನ್ನ' ಹೇಗೆ? ಚರ್ಚಿಸಿ.

೧೦) ಆಡಳಿತದಲ್ಲಿ ಕನ್ನಡ ಜಾರಿಗೆ ತರುವ ಬಗ್ಗೆ ನಡೆದಿರುವ ಪ್ರಯತ್ನಗಳನ್ನು ವಿವರಿಸಿ.

(ಪು.ತಿ.ನೋ.)



**III ಯಾವುದಾದರೂ ಎರಡು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ.** ೩೦

೧೧) ಭಾಷಾವಿಜ್ಞಾನದ ಐದು ಐತಿಹಾಸಿಕ ತಿರುವುಗಳನ್ನು ಪರಿಚಯ ಮಾಡಿಕೊಡಿ.

೧೨) ಶಿಷ್ಟಭಾಷೆ ಎಂದರೇನು? ಭಾಷಾವಿಜ್ಞಾನಿಗಳ ಅಭಿಪ್ರಾಯಗಳೊಂದಿಗೆ ಚರ್ಚಿಸಿ.

೧೩) ಸಂವಹನ ಮಾಧ್ಯಮಗಳಲ್ಲಿ ಕನ್ನಡ ಭಾಷೆಯ ಬಳಕೆಯ ಬಗ್ಗೆ ವಿವರಿಸಿ.

೧೪) ಕನ್ನಡ ಭಾಷೆಯ ಏಕೀಕರಣ ಎಂದರೇನು? ವಿದ್ವಾಂಸರ ಅಭಿಪ್ರಾಯಗಳನ್ನು ತಿಳಿಸಿ.

**IV. ಯಾವುದಾದರೂ ಐದು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ.** ೨೦

೧೫) ತೌಲನಿಕ ಭಾಷಾವಿಜ್ಞಾನ

೧೬) ವಿಭಕ್ತಿ ಪ್ರತ್ಯಯಗಳು

೧೭) ಲಿಪಿಸಂಸ್ಕರಣ

೧೮) ಕನ್ನಡ ಭಾಷೆಯ ಐತಿಹಾಸಿಕ ಸಂಶೋಧನೆ

೧೯) ಪಾರಿಭಾಷಿಕ ಪದಗಳು

೨೦) ವಿವರಣಾತ್ಮಕ ವ್ಯಾಕರಣ

೨೧) ಶೈಲಿ ವಿಜ್ಞಾನ

***

# ಕನ್ನಡ ಸಾಹಿತ್ಯ ಪರಿಷತ್ತು

## ಬೆಂಗಳೂರು – ೧೮

## ಕನ್ನಡ ರತ್ನ ಪರೀಕ್ಷೆ – ೨೦೧೫

### ಪ್ರಶ್ನೆಪತ್ರಿಕೆ – ೫

### ಜಾನಪದ ಸ್ವರೂಪ – ಕನ್ನಡ ಸಂಸ್ಕೃತಿ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**'ಎ' ಭಾಗ**

**I. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.** ೪೦

೧. ಜಾನಪದ ಎಂದರೇನು? ಜಾನಪದ ಅಧ್ಯಯನದ ಉದ್ದೇಶ ಮತ್ತು ಪ್ರಯೋಜನಗಳನ್ನು ವಿವರಿಸಿ.

೨. ಒಗಟು ಎಂದರೇನು? ಒಗಟಿನ ವಿಧಗಳನ್ನು ಬರೆದು ವಿವರಿಸಿ.

೩. ಜನಪದ ಸಂಕೀರ್ಣಕಥೆಗಳು ಯಾವುವು? ಸಂಕ್ಷಿಪ್ತವಾಗಿ ವಿವರಿಸಿ.

೪. "ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ" ಈ ಹೇಳಿಕೆಯನ್ನು ಚರ್ಚಿಸಿ.

೫. ಜನಪದ ಗಾಯಕರಲ್ಲಿ ಎಷ್ಟು ವಿಧ? ವಿವರಿಸಿ.

೬. ಕರ್ನಾಟಕದಲ್ಲಿ ಜಾನಪದ ಅಧ್ಯಯನ ನಡೆದು ಬಂದ ದಾರಿಯನ್ನು ಸಂಕ್ಷಿಪ್ತವಾಗಿ ವಿವರಿಸಿ.

೭. ಕ್ಷೇತ್ರಕಾರ್ಯ ಎಂದರೇನು? ಕ್ಷೇತ್ರಕಾರ್ಯದ ವಿಧಗಳು ಯಾವುವು? ವಿವರಿಸಿ.

**II. ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೧೦

ಅ. ಸಿ.ಎಫ್. ಪಾಟರ್

ಆ. ಸೋಬಾನೆ ಪದಗಳು

ಇ. ಜಾನಪದ ಲೋಕ

ಈ. ವೃತ್ತಿಗಾಯಕರು

(ಪು.ತಿ.ನೋ.)



ಉ. ನೀತಿಕಥೆಗಳು

ಊ. ಲಾವಣಿಗಳು

**'ಬಿ' ಭಾಗ**

**III. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.** ೪೦

೧. ಸಂಸ್ಕೃತಿ ಎಂದರೇನು? ಕನ್ನಡ ಸಂಸ್ಕೃತಿಯ ವೈಶಿಷ್ಟ್ಯವನ್ನು ಪರಿಚಯಿಸಿ.

೨. ಜನಪದ ಸಂಸ್ಕೃತಿಯ ಶ್ರೀಮಂತಿಕೆಯನ್ನು ತಿಳಿಸಿರಿ.

೩. ವಚನ ಸಾಹಿತ್ಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

೪. ಕನ್ನಡ ಶಾಸನ ಸಾಹಿತ್ಯವನ್ನು ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.

೫. ಹೊಯ್ಸಳ ವಾಸ್ತುಶಿಲ್ಪದ ವೈಶಿಷ್ಟ್ಯಗಳನ್ನು ಬರೆಯಿರಿ.

೬. ಕನ್ನಡ ಸಂಸ್ಕೃತಿಯ ಪೋಷಣೆಗೆ ನೆರವಾದ ನಾಟ್ಯ ಸಂಸ್ಕೃತಿಯನ್ನು ತಿಳಿಸಿಕೊಡಿ.

೭. 'ಸರ್ವಜನಾಂಗಗಳ ಶಾಂತಿಯ ತೋಟ' ಕನ್ನಡ ನಾಡು ಎಂಬುದನ್ನು ಧಾರ್ಮಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿವರಿಸಿ.

**IV. ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೧೦

ಅ. ಯಕ್ಷಗಾನ

ಆ. ಚಾವುಂಡರಾಯ

ಇ. ಹಲ್ಮಿಡಿಶಾಸನ

ಈ. ವೀರಗಲ್ಲು

ಉ. ಪುರಂದರದಾಸರು

ಊ. ಮಾಸ್ತಿಕಲ್ಲು

***